## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1107 |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17.03.2025 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಉತ್ತರ ಕನ್ನಡ ಜಿಲ್ಲೆ ಹಳಿಯಾಳ ವಿಭಾಗದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಫಾರೆಸ್ಟ್ ಕ್ಯಾಂಪ್‌ಗಳಿವೆ; ಮತ್ತು ಎಷ್ಟು ಜನ ಕ್ಯಾಂಪ್ ವಾಚರ್‌ಗಳು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ; (ವಲಯ ಮಟ್ಟದಲ್ಲಿ ಕ್ಯಾಂಪ್ ಮತ್ತು ವಾಚರ್‌ಗಳ ಮಾಹಿತಿ ನೀಡುವುದು) | ಉತ್ತರ ಕನ್ನಡ ಜಿಲ್ಲೆ ಹಳಿಯಾಳ ವಿಭಾಗದ 7 ಕಳ್ಳಬೇಟೆ ತಡೆಶಿಬಿರಗಳಲ್ಲಿ ಒಟ್ಟು 14 ಕಾವಲುಗಾರರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ವಿವರ ಈ ಕೆಳಕಂಡಂತಿರುತ್ತದೆ. |

| ವಲಯ | ಕಳ್ಳಬೇಟೆ ತಡೆ ಶಿಬಿರಗಳ ಸಂಖ್ಯೆ | ಹೊರಗುತ್ತಿಗೆ ನೌಕರರ ಸಂಖ್ಯೆ |
|---|---|---|
| ಹಳಿಯಾಳ | 1 | 2 |
| ಸಾಂಬ್ರಾಣಿ | 1 | 2 |
| ಭಾಗವತಿ | 1 | 2 |
| ದಾಂಡೇಲಿ | 1 | 2 |
| ವಿರ್ನೋಲಿ | 1 | 2 |
| ಜೋಯ್ಡಾ | 1 | 2 |
| ಬರ್ಚಿ | 1 | 2 |
| **ಒಟ್ಟು** | **7** | **14** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಆ) | ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕ್ಯಾಂಪ್ ವಾಚರ್‌ಗಳನ್ನು ಕೆಲವು ತಿಂಗಳುಗಳ ಕಾಲ ಕೆಲಸದಿಂದ ತೆಗೆದು ಸಂಬಳ ನಿಲ್ಲಿಸುತ್ತಿರುವುದು ನಿಜವೇ; ನಿಜವಿದ್ದಲ್ಲಿ, ಕಾರಣಗಳೇನು; | ಕಳ್ಳಬೇಟೆ ತಡೆ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾವಲುಗಾರರ ಮಜೂರಿಗೆ ಅವಶ್ಯವಿರುವ ವಾರ್ಷಿಕ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಆದುದರಿಂದ ಕೆಲಸದಿಂದ ತೆಗೆಯುವ ಹಾಗೂ ಮಜೂರಿ ನಿಲ್ಲಿಸುವ ಪ್ರಮೇಯ ಇರುವುದಿಲ್ಲ. |
| (ಇ) | ಸದರಿ ಕ್ಯಾಂಪ್ ವಾಚರ್‌ಗಳನ್ನು ಪುನ: ಕೆಲಸದಲ್ಲಿ ಮುಂದುವರೆಸಿಕೊಂಡು ಹೋಗುವಂತೆ ಮಾಡಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? | ಸರ್ಕಾರದಿಂದ ಅನುದಾನ ಹಂಚಿಕೆಯಾದಂತೆ ಕ್ಯಾಂಪ್‌ಗಳನ್ನು ನಿರ್ವಹಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 19 ಎಫ್‌ಟಿಎಸ್ 2025

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು